ಮೂಲ ದಾವಾ ಸಂಖ್ಯೆ. 37/2023 ಪಿ ಡಬ್ಲ್ಯೂ 2

(ದಿನಾಂಕ 22-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ದಾವಾ ಸರ್ವೆ ನಂಬರುಗಳು ಎಷ್ಟು, ಅವು ಎಷ್ಟೆಷ್ಟು ವಿಸ್ತೀರ್ಣಗಳು ಇರುತ್ತವೆ ಅನ್ನುವುದು ನಿಮಗೆ ಗೊತ್ತಾ ಎಂದರೆ ವಿಸ್ತೀರ್ಣ ನನಗೆ ಗೊತ್ತಿಲ್ಲ ಸರ್ವೆ ನಂ. 89 ಗೊತ್ತು ಎನ್ನುತ್ತಾರೆ. ಈ ಆಸ್ತಿಗಳು ನಮಗೆ ಯಾವ ವರ್ಷದಂದು ಬಂದವು ಅಂತಾ ಹೇಳಲು ಬರುವುದಿಲ್ಲ ಆದರೆ ಸದರಿ ಆಸ್ತಿಗಳನ್ನು ನಮ್ಮ ಅಜ್ಜಿಗೆ ಅವರ ತಂದೆ ದಾನವಾಗಿ ಕೊಟ್ಟಿರುತ್ತಾರೆ. ದಾವಾಸ್ತಿಗಳು ನಮ್ಮ ಹೆಸರಿಗೆ ಸುಮಾರು 5-6 ವರ್ಷದ ಹಿಂದೆ ದಾಖಲಾಗಿರುತ್ತವೆ. ನಿಮ್ಮ ಹೆಸರಿಗೆ ಖಾತೆ ಮಾಡಿಕೊಳ್ಳುವಾಗ ಎಷ್ಟು ಜಮೀನು ದಾಖಲಿದೆ ಅಂತಾ ನೋಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನಾವು ನೋಡಿಕೊಂಡಿಲ್ಲ ಆದರೆ 3.80 ಎಕರೆ ಅಂತಾ ತಿಳಿದುಕೊಂಡಿದ್ದೇವೆ. ಪಾಲುಪಟ್ಟಿಯನ್ನು ನಮ್ಮ ತಮ್ಮ ಹೇಳಿ ಬರೆಸಿದ್ದಾನೆ. ಆ ಸಮಯದಲ್ಲಿ ಪಹಣಿಯಲ್ಲಿ ಎಷ್ಟು ಕ್ಷೇತ್ರ ನಮ್ಮ ಹೆಸರಿಗೆ ದಾಖಲಾಗಿದೆ ಎನ್ನುವುದು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ದಾಖಲಾಗುವ ಪೂರ್ವದಲ್ಲಿ ಸದರಿ ಜಮೀನಿನ ಪಹಣಿ ನಮ್ಮ ತಂದೆಯ ಹೆಸರಿನಲ್ಲಿತ್ತು. 3.80 ಎಕರೆ ಜಮೀನಿನ ಪಹಣಿಯನ್ನು ನಮ್ಮ ಹೆಸರಿಗೆ ಮಾಡಿಕೊಡಿ ಅಂತಾ ನಮ್ಮ ತಮ್ಮ ತಹಶೀಲ್ದಾರ್ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ. ಆ ರೀತಿ ಯಾವುದೇ ಅರ್ಜಿಯನ್ನು ನೀಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪುರುಷೋತ್ತಮ ಇವರಿಗೆ ಸರ್ವೆ ನಂ.89 ರಲ್ಲಿ 3 ಎಕರೆ ಜಮೀನಿದೆ. ಪ್ರತಿವಾದಿಯ ಹಸೆರಿಗೆ ಸದರಿ ಜಮೀನಿನ ಪಹಣಿಯಲ್ಲಿ ಎಷ್ಟು ಜಮೀನು ದಾಖಲಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.89 ಒಟ್ಟು ವಿಸ್ತೀರ್ಣ 8.80 ಎಕರೆ ಇರುತ್ತದೆ. ಸದರಿ ಸರ್ವೆ ನಂಬರಿನಲ್ಲಿ ಪ್ರತಿವಾದಿ ಹೆಸರಿಗೆ 2.80 ಎಕರೆ ಜಮೀನು ದಾಖಲಿದೆ ಎಂದರೆ ನನಗೆ ಗೊತ್ತಿಲ್ಲ ಈ ವಿಚಾರ ನನಗೆ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಆಸ್ತಿಯನ್ನು ನಾಗರಾಜ ಇವರ ತಂದೆ ಹನಮಂತಪ್ಪ ಇವರಿಂದ ಖರೀದಿಸಿದ್ದಾರೆ. ಸದರಿ ಆಸ್ತಿಯನ್ನು ಪ್ರತಿವಾದಿಯ ತಂದೆ ದಿಃ 11-01-2005 ರಂದು ಹೊನ್ನಮ್ಮ ಇವರಿಂದ ಖರೀದಿ ಮಾಡಿದ್ದಾನೆಂದರೆ ಸರಿ. ಸದರಿಯವರು ಜಮೀನನ್ನು ಖರೀದಿಸಿದ ಸಮಯದಲ್ಲಿ ಸದರಿ 2.80 ಎಕರೆ ಜಮೀನನ್ನು ಅಳತೆ ಮಾಡಿಸಿ ಸ್ವಾಧೀನ ಪಡೆದಿದ್ದಾರೆಂದರೆ ಸಾಕ್ಷಿಯು ನಮಗೆ ನೋಟೀಸ್ ಬಂದಿಲ್ಲವೆನ್ನುತ್ತಾರೆ. ಪ್ರತಿವಾದಿಯು ಜಮೀನು ಖರೀದಿ ಮಾಡಿದ ವಿಚಾರ ನಮಗೆ ಅವರು ಖರೀದಿ

ಮಾಡಿದ ಬಹಳ ದಿನದ ನಂತರ ಗೊತ್ತಾಗಿದೆ ನಿಖರವಾಗಿ ಹೇಳಲು ಬರುವುದಿಲ್ಲ. ಅವರು ಖರೀದಿ ಮಾಡಿದ 2-3 ವರ್ಷದ ನಂತರ ನಮಗೆ ಅವರು ಜಮೀನು ಖರೀದಿ ಮಾಡಿರುವ ವಿಚಾರ ತಿಳಿದಿರಬಹುದು.

ನಮ್ಮ ಜಮೀನಿನ ಉಳುಮೆಯನ್ನು ನಾವೇ ಉಳುಮೆ ಮಾಡುತ್ತೇವೆ. ಪ್ರತಿವಾದಿಯು ತನ್ನ ಜಮೀನನ್ನು ಉಳುಮೆ ಮಾಡುತ್ತಾನೆಂದರೆ ಸರಿ. ಸದರಿ 2.80 ಎಕರೆ ಜಮೀನು ಪಾಲುವಿಭಾಗದಂತೆ ಪ್ರತಿವಾದಿಗೆ ಬಂದಿದ್ದು ಅವನೇ ಅದನ್ನು ಮಾಡುತ್ತಿದ್ದಾನೆಂದರೆ ಸರಿ. ಪ್ರತಿವಾದಿಯು ತಮ್ಮ ಜಮೀನನ್ನು ತಾನು ಮಾಡುತ್ತಿದ್ದು ನೀವು 3 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು 3.80 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇನೆ ಎನ್ನುತ್ತಾರೆ. 3.80 ಎಕರೆ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವಂತಾ ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲವೆಂದರೆ ಸರಿಯಲ್ಲ.

80 ಸೆಂಟ್ಸ ಜಮೀನನ್ನು ನಮ್ಮ ಹೆಸರಿಗೆ ಮಾಡಿ ಅಂತಾ ಎ ಸಿ ಮತ್ತು ಡಿ ಸಿ ನ್ಯಾಯಾಲಯದಲ್ಲಿ ನೀಡಿರುವಂತಹ ಅರ್ಜಿಗಳು ವಜಾ ಆಗಿರುತ್ತವೆಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಅವು ವಜಾ ಆಗಿರುತ್ತವೆನ್ನುತ್ತಾರೆ. 3.80 ಎಕರೆ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಸದರಿ ಅರ್ಜಿಗಳು ವಜಾ ಆಗಿರುತ್ತವೆಂದರೆ ಸರಿಯಲ್ಲ. 80 ಸೆಂಟ್ಸ ಜಮೀನಿನಲ್ಲಿ ನಾವು ಪ್ರತಿಕೂಲ ಕಬ್ಜನಾಥೆಯಿಂದ ಸ್ವಾಧೀನದಲ್ಲಿರುತ್ತೇವಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 80 ಸೆಂಟ್ಸ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಅದಕ್ಕನುಗುಣವಾಗಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ